Statement—(*concld.*)

9 Binnamangala
10 Bhodihalli
11 Kannagowdanahalli
12 Viswesvarapura
13 Darmanayakanathandya
14 Kodappanahalli
15 Gerahalli
16 Kodipalya
17 Srinivasapura
18 Arjunabettahalli
19 Araledibba
20 Madalakote
21 Malonagathiballi

Dasanapura Hobli.—

22 Kachanahalli
23 Madanayakanahalli
24 Mallasandra
25 Gangadanahalli

Thyamagondlu Hobli.—

26 Thippagondanahalli
27 Muddalinganahalli
28 Lakkasandra

Somapura Hobli.—

29 Narasipura Jatra well
30 Anchepalya
31 Benachanapalli
32 Giriyanapalya
33 Shivaganga
34 Kanbal
35 Channathimmayyapalya
36 Bugudihalli
37 Do
38 Lakkur
39 Thattekere
40 Suggiahnapalya
41 Kusraghatta

ಶ್ರೀ ಡಿ. ಎಂ. ಗೋವಿಂದರಾಜು.—ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳಿಗಾಗಿ ಏನಾದರೂ ಸುವ್ಯವಸ್ಥಿತ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಎಲ್ಲೆಲ್ಲ ಕುಡಿಯುವ ನೀರಿನ ಅವಶ್ಯಕತೆಯಿದೆಯೆಂದು ತಿಳಿದುಬಂದಿದೆಯೋ ಅಲ್ಲಿ ಗೆಲ್ಲಾ ಕೊಡಲಾಗಿದೆ. ಸರ್ವೆ ಮಾಡಿಸಿಲ್ಲ ಹಿಂದೆ ಅನೇಕ ಮಾನ್ಯಸದಸ್ಯರು ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿನ ಬೇಕೆಂದು ಕೇಳಿದ್ದರ ಮೇಲೆ ಸಾಧ್ಯವಾದಮಟ್ಟಿಗೂ ಇನ್ನೆರಡು ವರ್ಷಗಳಲ್ಲ ಬಹುಭಾಗದ ಹಳಿ ಗಳಿಗೆ ಬಾವಿಗಳನ್ನು ಕೊಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ನೆಲಮಂಗಲ ತಾಲ್ಲೂಕಿನಲ್ಲಿ 157 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲವೆಂದು ಹೇಳಿದ್ದೀರಿ. ಈ 157 ಗ್ರಾಮ ಗಳಿಗೂ ಬಾವಿ ಕೊಟ್ಟು ಪೂರೈಸಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೆ?

ಶ್ರೀ ಟಿ. ಚನ್ನಯ್ಯ.—ಇಷ್ಟು ವರ್ಷದರ್ಲಾಗುತ್ತ ದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಎರಡು ವರ್ಷ ದಲ್ಲಿ ಪೂರೈಸುತ್ತೇವೆಂದು ಹೇಳಿದ್ದೀರಿ. ಈಗ 157 ಬಾವಿಗಳನ್ನೂ ಪೂರೈಸಬೇಕಾದರೆ ಎರಡು ವರ್ಷದಲ್ಲೇ ಆಗುತ್ತದೆಯೇ?

ಶ್ರೀ. ಟಿ. ಚೆನ್ನಯ್ಯ.—ಎಲ್ಲಾ ಬಾವಿಗಳನ್ನೂ ಎರಡು ವರ್ಷದಲ್ಲ ಮಾಡಿಸಿ ಮುಗಿಯುತ್ತದೆಂದು ಹೇಳು ವುದಕ್ಕಾಗ ವುದಿಲ್ಲ. ಏಕೆಂದರೆ, ಬಾವಿಗಳನ್ನು ತಗೆ ಯುವುದಕ್ಕೆ ಹೋದರೆ ಎರಡು ಮೂರು ವರ್ಷಗಳಲ್ಲ ಮಾಡಬಹುದು. ಆದರೆ ಎಷ್ಟೋ ವೇಳೆ ಸ್ಯಾಂಕ್ಷನ್ ಮಾಡಿದರೂ ಸಾಕಷ್ಟು ಕಂಟ್ರಾಕ್ಟರುಗಳು ಮುಂದೆ ಬರದೆ ಬಾವಿಗಳ ಕೆಲಸ ನಿಧಾನವಾಗುತ್ತಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಾವಿಗಳಿಗೆ ಹೆಚ್ಚಿನ ಅವಶ್ಯಕತೆಯಿದೆಯೆಂಬುದು ತಮಗೆ ಈಗಾಗಲೇ ವೇದ್ಯವಾಗಿರುವುದರಿಂದ ಈ ತಾಲ್ಲೂಕಿಗೆ ಹೆಚ್ಚಿನ ಹಣ ಒದಗಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಎಷ್ಟೆಷ್ಟು ಗ್ರಾಮಗಳಿಗೆ ಕೊಡಲು ಸಾಧ್ಯವಾಗುತ್ತದೋ ಅಷ್ಟಷ್ಟು ಗ್ರಾಮ ಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲು ಪ್ರಯತ್ನಮಾಡುತ್ತೇವೆ.

Combined Hospital, Arsikere.

Q.–915. Sri K. PANCHAKSHARIAH (Arsikere).—

Will the overnment be pleased to state :—

(*a*) the grade under which the Combined Hospital in Arsikere town is classified ;

(*b*) the number of doctors and the number of nurses working in this hospital ;

(*c*) the number of patients treated in this hospital in 1952–53, 1953–54 and 1954–55 ;

(*d*) the amount of grant given by Government to this hospital ?

A.—Sri T. CHANNIAH (Minister for Public Health and Local Self-Government).—

(*a*) The Hospital is not classified under any grade.

(SRI T. CHANNIAH.)

(*b*) Doctors ... 2
Nurse ... 1

(*c*)

Year	*In-patients*	*Out-patients*
1952–53	633	46,066
1953–54	707	49,375
1954–55	938	58,916

(*d*) It is a Government institution and hence there is no question of giving any grant from Government.

ಶ್ರೀ ಕೆ. ಪಂಚಾಕ್ಷರಯ್ಯ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಆಸ್ಪತ್ರೆಗಳನ್ನು ದರ್ಜೆವಾರು ವಿಂಗಡಿಸಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಹಾಗಾದರೆ ತಾವು ಮೈಸೂರು ಸಂಸ್ಥಾನದಲ್ಲಿರತಕ್ಕ ಆಸ್ಪತ್ರೆಗಳನ್ನು ದರ್ಜೆವಾರಾಗಿ ವಿಂಗಡಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈಗ ಯಾವ ಯಾವ ತಾಲ್ಲೂಕುಗಳಲ್ಲಿ ಮೇಜರ್ ಇನ್‌ಸ್ಟಿಟ್ಯೂಷನ್‌ಗಳು ಇವೆ ; ಅಲ್ಲಿ ಯಾವ ಯಾವ ಗ್ರೇಡಿನ ಡಾಕ್ಟರುಗಳು ಕೆಲಸಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರದವರು ಉತ್ತರ ಒದಗಿಸಿದ್ದಾರೆ. ಈಗ ಅರಸೀಕೆರೆಯಲ್ಲಿರುವ ಆಸ್ಪತ್ರೆ ಏನು Iನೇ ಗ್ರೇಡ್ ಅಥವಾ IIನೇ ಗ್ರೇಡ್ ಅಥವಾ IIIನೇ ಗ್ರೇಡ್ ಆಸ್ಪತ್ರೆಯೇ ಎಂದು ತಿಳಿದುಕೊಳ್ಳಲು ತಾವೀ ಪ್ರಶ್ನೆ ಹಾಕಿದ್ದೀರಿ. ಆದರೆ ಅದಕ್ಕೆ ಇಲ್ಲಿ ಯಾವ ಉತ್ತರವನ್ನೂ ಒದಗಿಸಲು ಸಾಧ್ಯವಾಗಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—"G. O. No. 116-40—120-54-2, dated 8-11-1954. re: Assistant Surgeon's grade in Arsikere Hospital".

ಈ ರೀತಿಯಾಗಿ ಮೈಸೂರು ಗೆಜೆಟ್ಟಿನಲ್ಲಿ ಒಂದು ಆರ್ಡರನ್ನು ಹೊರಡಿಸಿದ್ದಾರೆ. ಈ ಆರ್ಡರ್ ಪ್ರಕಾರ ಈಗ ಆ ಅರಸೀಕೆರೆಯಲ್ಲಿರುವ ಆಸ್ಪತ್ರೆಯನ್ನು ಸೆಕೆಂಡ್ ಗ್ರೇಡ್ ಆಸ್ಪತ್ರೆಯೆಂದು ತಿಳಿಸಿದೆ. ಈಗ ತಾವು ಇಲ್ಲಿ ಉತ್ತರ ಒದಗಿಸುವುದರಲ್ಲಿ ಆ ರೀತಿ ಯಾವ ಗ್ರೇಡು ಗಳನ್ನೂ ಮಾಡಿಲ್ಲ ಎಂದು ಹೇಳುತ್ತೀರಿ. ಈಗ ಈ ಎರಡು ಉತ್ತರಗಳ ಪೈಕಿ ನಿಜ ಯಾವುದು ? ಸುಳ್ಳು ಯಾವುದು !

ಶ್ರೀ ಟಿ. ಚೆನ್ನಯ್ಯ.—ಅಲ್ಲಿಗೆ ಈಗ ಸೆಕೆಂಡ್ ಗ್ರೇಡ್ ಡಾಕ್ಟರನ್ನು ಹಾಕಬೇಕೆಂದು ತೀರ್ಮಾನಮಾಡಿರುವ ಹಾಗೆ ಕಾಣುತ್ತದೆ. ಅವರು ಸೆಕೆಂಡ್ ಗ್ರೇಡ್ ಡಾಕ್ಟರಾದರೂ ಎಂ.ಬಿ.ಬಿ.ಎಸ್. ಪಾಸ್‌ಮಾಡಿಕೊಂಡು ಪ್ರೊಬೇಷನರಿ ಪೀರಿಯಡ್ಡಿನಲ್ಲಿ ಅಲ್ಲಿ ಕೆಲಸಮಾಡಲು ಹಾಕಿರುತ್ತಾರೆ. ಇವರನ್ನು ಸೆಕೆಂಡ್ ಗ್ರೇಡ್ ಡಾಕ್ಟರೆಂದು ಕರೆಯಲಾಗುತ್ತಿದೆ. ಮೂರನೇ ಗ್ರೇಡಿನ ಡಾಕ್ಟರೆಂದರೆ ಎಲ್.ಎಂ.ಪಿ. ಪಾಸ್‌ಮಾಡಿರುತ್ತಾರೆ. ಇವರು ನುರಿತಂಥವರಾಗಿದ್ದರೆ ಅಂಥ ಸ್ಥಳಗಳಿಗೆ ಹಾಕಬಹುದು ಎಂದು ಇದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ನಾನು ಕೇಳುತ್ತಿರುವ ಪ್ರಶ್ನೆಯೇ ಬೇರೆ, ನೀವು ಕೊಡುತ್ತಿರುವ ಉತ್ತರವೇ ಬೇರೆ. ಈಗ ನಾನು ಕೇಳಿದ್ದ ಪ್ರಶ್ನೆಗೆ ತಾವೀಗ ಉತ್ತರ ಒದಗಿಸಿರುವುದು ತಪ್ಪಾಗಿದೆ ಹೀಗೆ ಈ ಸಭೆಗೆ ತಪ್ಪು ವಿಷಯಗಳನ್ನು ಒದಗಿಸಿರುವ ಅಧಿಕಾರಿಗಳ ಬಗ್ಗೆ ತಾವೇನು ಕಾರ್ಯಕ್ರಮ ಕೈಕೊಳ್ಳುತ್ತೀರಿ ?

Mr. SPEAKER.—The point is very clear. The answer furnished is contrary to the Government Order. Why is this false answer furnished here? That is a serious mistake. The Department cannot furnish a wrong answer to the House.

Sri T. CHANNIAH.—His contention is that at present, instead of posting a second grade Assistant Surgeon, a third grade Assistant Surgeon has been posted there.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಪ್ರಶ್ನೆಯನ್ನು ನಾನು ಮುಂದೆ ಕೇಳುತ್ತೇನೆ. ಈಗ ಇಂಥ ಮಹಾ ಸಭೆಗೇನೆ ಸುಳ್ಳು ವಿಷಯವನ್ನು ತಿಳಿಸಿರತಕ್ಕ ಅಧಿಕಾರಿಗಳ ಬಗ್ಗೆ ತಾವೇನು ಕಾರ್ಯಕ್ರಮವನ್ನು ಕೈಕೊಳ್ಳುತ್ತೀರಿ ?

ಶ್ರೀ ಟಿ. ಚನ್ನಯ್ಯ.—ತಾವು ಕೇಳಿರತಕ್ಕ ಪ್ರಶ್ನೆ ಆಸ್ಪತ್ರೆಗಳಲ್ಲಿ ಎಷ್ಟು ಗ್ರೇಡುಗಳಿವೆ ಎಂದು. ಅದಕ್ಕೆ ಸರಿಯಾದ ಉತ್ತರವನ್ನು ಈಗ ಇಲ್ಲಿ ಒದಗಿಸಲಾಗಿದೆ. ಆ ಆಸ್ಪತ್ರೆಯನ್ನು ಗ್ರೇಡ್‌ವಾರ್ ವಿಂಗಡಿಸಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ತಾವು ಕೊಟ್ಟಂಥ ಉತ್ತರದಲ್ಲಿ ಆಸ್ಪತ್ರೆಗಳನ್ನು ಹಾಗೆ ವಿಂಗಡಿಸಿಲ್ಲ, ಡಾಕ್ಟರುಗಳನ್ನು ಮಾತ್ರ ಹಾಗೆ ದರ್ಜೆವಾರು ವಿಂಗಡಿಸಿದ ಎಂದು ಹೇಳಿದಿರಿ. ಈಗ ಹಾಸನದಲ್ಲಿರುವ ಕಂಬೈಂಡ್ ಆಸ್ಪತ್ರೆ ಬಿಟ್ಟರೆ ಈ ಅರಸೀಕೆರೆ ಸುತ್ತ ಮುತ್ತಲೂ 50 ಮೈಲಿ ಘಾಸಲೆಯೊಳಗೆ ಮತ್ತೊಂದು ಆಸ್ಪತ್ರೆಯಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ಆಸ್ಪತ್ರೆಗಳಲ್ಲಿ ಈಗ ಎಷ್ಟು ಬೆಡ್ಸ್ ಇವೆ ?

ಶ್ರೀ ಟಿ. ಚೆನ್ನಯ್ಯ.—ನಿಖರವಾಗಿ ಎಷ್ಟು ಬೆಡ್ಸ್ ಇರುತ್ತವೆಂಬ ವಿಚಾರ ಗೊತ್ತಿಲ್ಲ. ಬಹುಶಃ 25-30 ಬೆಡ್ಸ್ ಇರಬಹುದು.

ಶ್ರೀ ಕೆ. ಪಂಚಾಕ್ಷರಯ್ಯ.—ಹೀಗೆ ಇನ್‌ಪೇಷೆಂಟ್ಸ್‌ಗಳಿರುವ ಆಸ್ಪತ್ರೆ ಈ ಸರಹದ್ದಿನಲ್ಲಿ ಹಾಸನದ ಆಸ್ಪತ್ರೆ ಬಿಟ್ಟರೆ ಇನ್ನಾವ ಆಸ್ಪತ್ರೆಯೂ ಈ ಸರಹದ್ದಿನಲ್ಲಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ 1952-53ರಲ್ಲಿ ಈ ಇನ್‌ಪೇಷೆಂಟ್ಸ್‌ಗಳ ಸಂಖ್ಯೆ 633 ಇದ್ದದ್ದು 1953-54ಕ್ಕೆ 707ಕ್ಕೆ ಏರಿದೆ. 1954-55ಕ್ಕೆ 938ಕ್ಕೆ ಹೋಗಿದೆ. ಔಟ್‌ಪೇಷೆಂಟ್ಸ್‌ಗಳ ಸಂಖ್ಯೆ 1952-53ರಲ್ಲಿ 46 ಸಾವಿರ ಇದ್ದದ್ದು 1954-55ರಲ್ಲಿ 58 ಸಾವಿರಕ್ಕೆ ಏರಿರುವುದರಿಂದ ಈಗ ಈ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸತಕ್ಕ ಅವಶ್ಯಕತೆ ಬಹಳವಾಗಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಾಗೆ ಇದನ್ನು ಬಡಾವಣೆ ಗೊಳಿಸತಕ್ಕ ಆವಶ್ಯಕತೆ ಕಂಡುಬಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ ಪಂಚಾಕ್ಷರಯ್ಯ.—ಮೊದಲು ಇದು I ಗ್ರೇಡ್ ಆಸ್ಪತ್ರೆಯಾಗಿತ್ತು. ಈಗ II ಗ್ರೇಡಿಗೆ ಇಳಿಸಿರುತ್ತಾರೆ. ಇದನ್ನು ಪುನಃ ಪರಿಶೀಲನೆ ಮಾಡಿ ಮೊದಲಿದ್ದ ಹಾಗೆ I ಗ್ರೇಡ್ ಆಸ್ಪತ್ರೆಯನ್ನಾಗಿ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗ ನಾವು ಅರಸೀಕೆರೆಗೆ II ಗ್ರೇಡ್ ಡಾಕ್ಟರನ್ನು ಕಳುಹಿಸಿದ್ದೇವೆ. ತಾವು ಹಾಗೆ I ಗ್ರೇಡ್ ಡಾಕ್ಟರೇ ಬೇಕು ಎಂದು ಪ್ರಶ್ನೆ ಕೇಳಿದ್ದರೆ ಅದಕ್ಕೆ ಉತ್ತರ ಕೊಡಲಾಗುತ್ತಿತ್ತು. ಈಗಲೂ

ಅದರ ಬಗ್ಗೆ ಮತ್ತೊಮ್ಮೆ ಆಲೋಚನೆಮಾಡಿ ಅವಶ್ಯಕತೆಗೆ ತಕ್ಕಹಾಗೆ ನೂಕ್ಕ ಏರ್ಪಾಡನ್ನು ಮಾಡಲಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ಹಾಲಿ ತಾವು ಅಲ್ಲಿಗೆ ಕೊಡಲಾಗಿದ್ದ III ಗ್ರೇಡ್ ಡಾಕ್ಟರ ಸ್ಥಾನ ಖಾಲಿಬಿದ್ದಿದೆ ಅಲ್ಲವೆ?

ಶ್ರೀ ಟಿ ಚೆನ್ನಯ್ಯ.—ನೋಟೀಸ್.

Sri Sydney A. THOMAS.—May I know the hours of duty of this one Nurse in this hospital?

Sri T. CHANNIAH.—I think it varies from 9 hours to 10 hours.

Sri Sydney A. THOMAS.—Who attends to these in-patients when this Nurse is off-duty?

Sri T. CHANNIAH.—There will be Ward Ayas, Attendants, etc.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲಿ ಮೊದಲು I ದರ್ಜೆ ಆಸ್ಪತ್ರೆ ಇದ್ದದ್ದನ್ನು IIನೇ ದರ್ಜೆಗೆ ಪರಿವರ್ತನೆಮಾಡಲು ಕಾರಣವೇನಿತ್ತು?

ಶ್ರೀ ಟಿ. ಚೆನ್ನಯ್ಯ.—ಏನೋ ಆ ರೀತಿ ಅನಿವಾರ್ಯ ಬಂದು ಹಾಗೆ ಮಾಡಿರಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದನು ಯಾವ ಕಾರಣಗಳ ಮೇಲೆ ತೀರ್ಮಾನಮಾಡುತ್ತೀರಿ?

ಶ್ರೀ ಟಿ. ಚೆನ್ನಯ್ಯ.—ಡಾಕ್ಟರುಗಳ ಅಭಾವದಿಂದ ಆ ರೀತಿ ಮಾಡಿರಬಹುದು.

12-30 P.M.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಿಂದೆ Iನೇ ದರ್ಜೆಯ ಡಾಕ್ಟರುಗಳನ್ನು ಇಲ್ಲಿಗೆ postಮಾಡುತ್ತಿರಲಿಲ್ಲವೇ?

ಡಾ|| ಆರ್. ನಾಗನಗೌಡ.—ಹಿಂದೆ ಮಾಡಿದ್ದೆವೆ. ಈಗ ಡಾಕ್ಟರುಗಳ shortage ಇರುವುದರಿಂದ IIIನೇ ಗ್ರೇಡಿನ surgeon ರವರನ್ನು ಅಲ್ಲಿಗೆ ಹಾಕಿದೆವೆ

ಶ್ರೀ ಎ. ವಿ. ನರಸಿಂಹರೆಡ್ಡಿ.—ಸಂಸ್ಥಾನದಲ್ಲಿ ಡಾಕ್ಟರುಗಳ ಉದ್ಯೋಗಕ್ಕೆ ಒರುವವರು ತಕ್ಕಷ್ಟು ಸಂಖ್ಯೆಯಲ್ಲಿ ಇಲ್ಲವೇ?

(ಉತ್ತರವಿಲ್ಲ.)

12-30 P.M.

Rural Electrification, Nanjangud Taluk.

Q.—686. **Sri M. LINGANNA** (Nanjangud).—

Will the Government be pleased to state:—

(*a*) the number of estimates prepared for (i) I.P. Sets, (ii) Rural Electrification in Nanjangud Taluk for the past two years;

(*b*) the names of villages wherein the above estimates are prepared and the year in which they were prepared;

(*c*) the number of them that are sanctioned and the number of them still pending sanction?

A.—**Dr. R. NAGAN GOWDA** (Minister for Agriculture).—

(*a*) (i) I.P. Sets ... 23
(ii) Rural Electrification 15

(*b*) *Irrigation Pump Sets.*

1953–54.

1	Kadakola	7	Basarattige
2	Halepura	8	Heggadahalli
3	Nagarle	9	Variyur
4	Devanur	10	Basandihundi
5	Dikahalli	11	Nanjangud Town
6	Karohatti		

1954–55.

1	Hedathale	6	Echagalli
2	Hukkadahalli	7	Upparahalli
3	Harganpur	8	Halepura
4	Dodkavalande	9	Hemmargala
5	Chickavalande		

Rural Electrification.

1953–54.

1	Horalavadi	8	Belaguli
2	Hullavadi	9	Chicknaiya
3	Nerale	10	Madrahalli
4	Basavattige	11	Golur
5	Hemmergala	12	Doddakanya
6	Sinduvalli	13	Tumbaneale
7	Aeemarahalli		

1954–55.

1	Bhoravalli	2	Immavu

(*c*) All the 23 estimates for power supply to I.P. Sets have been sanctioned.

Out of 15 estimates for Rural Electrification, 6 have been sanctioned and 9 are pending.

Sri M. LINGANNA.—May I know the names of the villages whose estimates are pending sanction?

Dr. R. NAGAN GOWDA.—There are nine villages for which electrification could not be taken up and they are:—

Beeranahalli	Doddakanya
Belagulli	Tumbanerale
Channiahnahalli	Goranalli
Madahalli	Immavu.
Golur	

Sri M. LINGANNA.—When were the estimates for all these villages received?

Dr. R. NAGAN GOWDA.—These estimates had been received quite a long while ago. But they could not be taken up forthe simple reason that the return is not adequate.